ಮೈಸೂರು ನಗರದ ಬಡಾವಣೆಗಳಿಂದ ಬೆಂಗಳೂರಿಗೆ ಬಸ್ ಸೌಲಭ್ಯ.

4222(4603) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದ ಯಾವ ಯಾವ ಬಡಾವಣೆಗಳಿಂದ ಯಾವ ಯಾವ ಸಮಯದಲ್ಲಿ ಬೆಂಗಳೂರಿಗೆ ನೇರವಾಗಿ ಬಸ್ ಸೌಲಭ್ಯ ಒದಗಿಸಲಾಗಿದೆ; ಹಾಗೆಯೇ ಬೆಂಗಳೂರಿನಿಂದ ಮೈಸೂರಿಗೆ ;

ಆ) ಈ ಸೌಲಭ್ಯವನ್ನು ನಗರದ ವಿವಿಧ ಬಡಾವಣೆಗಳಿಗೂ ವಿಸ್ತರಿಸಬೇಕೆಂಬ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು) :—

ಅ) ಮೈಸೂರಿನಿಂದ ವಿವಿಧ ಬಡಾವಣೆಗಳಾದ ಚಾಮುಂಡಿಪುರಂ, ಸರಸ್ವತಿಪುರಂ, ರಾಮಕೃಷ್ಣನಗರ, ಶ್ರೀರಾಮಪುರ, ಜೆ.ಪಿ. ನಗರ ಬನ್ನಿಮಂಟಪ ಬಡಾವಣೆ, ಹೂಟಗಳ್ಳಿ ಬಡಾವಣೆ ಮತ್ತು ಹೆಬ್ಬಾಳದಿಂದ ಬೆಂಗಳೂರಿಗೆ ಸಾರಿಗೆ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದೆ. ಹಾಗೆಯೇ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಿಂದಲೂ ಇದೇ ಬಡಾವಣೆಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಸಾರಿಗೆಗಳ ವಿವರಗಳನ್ನು ಅಡಕ-ಅನಲ್ಲಿ ನೀಡಲಾಗಿದೆ. ಹಾಗೆಯೇ ಬೆಂಗಳೂರಿನ ಜಯನಗರ 4ನೇ ಬ್ಲಾಕಿನಿಂದ ಮೈಸೂರಿಗೆ ನಿಲಗಡೆರಹಿತ ಸಾರಿಗೆಯ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಆ) ಮೇಲೆ ಹೇಳಿದಂತೆ ಪ್ರಯಾಣಿಕರ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಗರದ ವಿವಿಧ ಬಡಾವಣೆಗಳಿಗೆ ಈಗಾಗಲೇ ಸೌಲಭ್ಯ ವಿಸ್ತರಿಸಿದೆ.

ಮೈಸೂರಿನ ವಿವಿಧ ಬಡಾವಣೆಗಳಿಂದ ಬೆಂಗಳೂರಿಗೆ ಆಚರಣೆಯಲ್ಲಿರುವ ನಿರ್ವಾಹರಹಿತ, ನಿಲುಗಡೆ ರಹಿತ ಸಾರಿಗೆಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಅನುಸೂಚಿ ಸಂಖ್ಯೆ	ಬಡಾವಣೆಯ ಹೆಸರು	ನಿರ್ಗಮನ ವೇಳೆ	ಸಾರಿಗೆ ವರ್ಗ	ಬೆಂಗಳೂರಿಗೆ ಬರುವ ವೇಳೆ
1)	ನಗರ-2 : 79	ಚಾಮುಂಡಿಪುರಂ	ಬೆಳಿಗ್ಗೆ 6-15	ಡೀಲಕ್ಸ್	ಬೆಳಿಗ್ಗೆ 9-45
2)	ನಗರ-2 : 81	ಸರಸ್ವತಿಪುರಂ	" 6-40	"	" 10-15
3)	ನಗರ-2 : 22	ರಾಮಕೃಷ್ಣನಗರ	" 6-55	"	" 10-40
4)	ನಗರ-2 : 116	ಶ್ರೀರಾಮಪುರಂ 2ನೇ ಹಂತ	" 5-15	ವೇಗದೂತ (ನಿಲುಗಡೆರಹಿತ)	" 8.45
5)	ನಗರ-2 :82	ಜೆ.ಪಿ. ನಗರ	" 7-30	"	" 11-00
6)	ಗ್ರಾ-2 : 101	ಬನ್ನಿಮಂಟಪ ಬಡಾವಣೆ	" 5-40	"	" 9-00
7)	ಗ್ರಾ-2 : 3	ಹೂಟಗಳ್ಳಿ ಬಡಾವಣೆ	" 5-35	"	" 9.20
8)	ಗ್ರಾ-2 : 2	ಹೆಬ್ಬಾಳು	" 5-50	"	" 9.30

ಬೆಂಗಳೂರು ಕೆಂಪೇಗೌಡ ಬಸ್ ನಿಲ್ದಾಣದಿಂದ ಮೈಸೂರಿನ ವಿವಿಧ ಬಡಾವಣೆಗಳಿಗೆ ಆಚರಣೆಯಲ್ಲಿರುವ ಸಾರಿಗೆಯ ವಿವರ

ಕ್ರ.ಸಂ.	ಅನುಸೂಚಿ ಸಂಖ್ಯೆ	ಎಲ್ಲಿಂದ	ನಿರ್ಗಮನ	ವೇಳೆ	ಸಾರಿಗೆ ವರ್ಗ	ಸಾರಿಗೆ ಬರುವ ಸ್ಥಳ	ಬರುವ	ವೇಳೆ
1)	ನಗರ-2 : 79	ಬೆಂಗಳೂರು	ಸಂಜೆ	7-00	ಡೀಲಕ್ಸ್	ಚಾಮುಂಡಿಪುರಂ	ರಾತ್ರಿ	10.30
2)	ನಗರ-2 : 81	--"--	"	7-20	"	ಸರಸ್ವತಿಪುರಂ	"	10.50
3)	ನಗರ-2 : 22	--"--	"	7-40	"	ರಾಮಕೃಷ್ಣನಗರ	"	11-10
4)	ನಗರ-2 : 118	--"--	"	5-45	ವೇಗದೂತ (ನಿಲುಗಡೆರಹಿತ)	ಶ್ರೀರಾಮಪುರಂ 2ನೇ ಹಂತ	"	9-15
5)	ನಗರ-2 : 82	--"--	ರಾತ್ರಿ	8-00	"	ಜೆ.ಪಿ. ನಗರ	"	11-30
6)	ಗ್ರಾ-2 : 101	--"--	ಸಂಜೆ	6-00	"	ಬನ್ನಿಮಂಟಪ ಬಡಾವಣೆ	"	9-30
7)	ಗ್ರಾ-2 : 3	--"--	"	6-20	"	ಹೂಟಗಳ್ಳಿ ಬಡಾವಣೆ	"	9.50
8)	ಗ್ರಾ-2 : 2	--"--	"	6-40	"	ಹೆಬ್ಬಾಳು	"	10-10
8)	ಕೆ.ಬಿ.ಎಸ್ - 5	ಜಯನಗರ 4ನೇ ಬ್ಲಾಕ್	ಬೆಳಗ್ಗೆ	6-15	"	ಮೈಸೂರು	ಬೆಳಗ್ಗೆ	9-15